# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 145
ಸದಸ್ಯರ ಹೆಸರು : ಶ್ರೀ ಎ. ವಸಂತ ಕುಮಾರ್
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 05.03.2025

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ರಾಯಚೂರು ಜಿಲ್ಲೆಯಲ್ಲಿ ಸಂಚಾರ ಮಾಡುವ ಒಟ್ಟು ಸರ್ಕಾರಿ ಬಸ್ಸುಗಳ ಸಂಖ್ಯೆ ಎಷ್ಟು; ನೂತನವಾಗಿ ಎಷ್ಟು ಬಸ್‌ಗಳು ಓಡಾಡುತ್ತಿವೆ; ದುರಸ್ತಿಯಲ್ಲಿರುವ ಬಸ್ಸುಗಳ ಸಂಖ್ಯೆ ಎಷ್ಟು;</td><td>ರಾಯಚೂರು ಜಿಲ್ಲೆಯು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ವ್ಯಾಪ್ತಿಯಲ್ಲಿ ಬರುತ್ತದೆ. ಕೆ.ಕೆ.ಆರ್.ಟಿ.ಸಿ ಸಂಸ್ಥೆಯಲ್ಲಿ ಒಟ್ಟು 5034 ಬಸ್ಸುಗಳು ಕಾರ್ಯಾಚರಣೆಗೊಳ್ಳುತ್ತಿವೆ.<br><br>2019-23ರ ವರೆಗೆ ಹೊಸ ಬಸ್ಸುಗಳನ್ನು ಖರೀದಿಸಿರುವುದಿಲ್ಲ.<br><br>ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮವು 2023-24 ಮತ್ತು 2024-25ರಲ್ಲಿ ಒಟ್ಟು 1025 ಹೊಸ ಬಸ್‌ಗಳನ್ನು ಖರೀದಿಸಲಾಗಿರುತ್ತದೆ.<br><br>2023-24 ಮತ್ತು 2024-25ರಲ್ಲಿ ಒಟ್ಟು 156 ಹೊಸ ಬಸ್‌ಗಳನ್ನು ರಾಯಚೂರು ಜಿಲ್ಲೆಗೆ ನೀಡಲಾಗಿರುತ್ತದೆ.<br><br>ಪ್ರಸ್ತುತ ನಿಗಮದ ರಾಯಚೂರ ವಿಭಾಗದಲ್ಲಿ ಒಟ್ಟು 692 ಬಸ್ಸುಗಳು ಕಾರ್ಯಾಚರಣೆಗೊಳ್ಳುತ್ತಿದ್ದು, ಈ ಪೈಕಿ 156 ಹೊಸ ಬಸ್‌ಗಳಿರುತ್ತವೆ. ವಿವರ ಈ ಕೆಳಕಂಡಂತಿದೆ:-<br><br>
<table>
<tr><th rowspan="2">ಘಟಕ</th><th rowspan="2">ಘಟಕದಲ್ಲಿರುವ ಒಟ್ಟು ಬಸ್ಸುಗಳು</th><th colspan="3">ಹೊಸ ಬಸ್ಸುಗಳ ವಿವರ</th></tr>
<tr><th>2023-24</th><th>2024-25</th><th>ಒಟ್ಟು</th></tr>
<tr><td>ರಾಯಚೂರ -1</td><td>54</td><td>03</td><td>08</td><td>11</td></tr>
<tr><td>ರಾಯಚೂರ -2</td><td>96</td><td>13</td><td>04</td><td>17</td></tr>
<tr><td>ರಾಯಚೂರ -3</td><td>68</td><td>11</td><td>01</td><td>12</td></tr>
<tr><td>ಲಿಂಗಸ್ಗೂರ</td><td>143</td><td>24</td><td>11</td><td>35</td></tr>
<tr><td>ಸಿಂಧನೂರ</td><td>103</td><td>17</td><td>07</td><td>24</td></tr>
<tr><td>ಮಾನ್ವಿ</td><td>52</td><td>06</td><td>05</td><td>11</td></tr>
<tr><td>ಮಸ್ಕಿ</td><td>86</td><td>12</td><td>10</td><td>22</td></tr>
<tr><td>ದೇವದುರ್ಗ</td><td>90</td><td>20</td><td>04</td><td>24</td></tr>
<tr><td>ಒಟ್ಟು</td><td>692</td><td>106</td><td>50</td><td>156</td></tr>
</table>
<br>ಸದರಿ 692 ಬಸ್ಸುಗಳ ಪೈಕಿ 40 ಬಸ್ಸುಗಳು ರಹದಾರಿ ನವೀಕರಣ, ಭಾರಿ ಕವಚ ದುರಸ್ತಿ, ರಿ-ಫರಭಿಶಿಂಗ್, ಅಫಘಾತ ದುರಸ್ತಿ ಇತ್ಯಾದಿ ಕಾರಣಗಳಿಂದ ದುರಸ್ತಿಯಲ್ಲಿರುತ್ತವೆ.</td></tr>
</table>

| ಕ್ರ. ಸಂ. | ಪ್ರಶ್ನೆ | ಉತ್ತರ |
| --- | --- | --- |
| ಆ. | ಈ ಜಿಲ್ಲೆಯಲ್ಲಿ ತಾಲ್ಲೂಕಿನಿಂದ ಹಳ್ಳಿಗಳ ಮಾರ್ಗದ ಸಂಚಾರಕ್ಕೆ ಹಳೆಯ ಬಸ್ಸುಗಳನ್ನು ನೀಡಲು ಕಾರಣಗಳೇನು; ಹೊಸ ಬಸ್ಸುಗಳನ್ನು ನೀಡಲು ಇರುವ ಅಡಚಣೆಗಳೇನು; ವಿವರ ನೀಡುವುದು; | ಈ ಜಿಲ್ಲೆಯ ತಾಲ್ಲೂಕಿನಿಂದ **ಹಳ್ಳಿಗಳ** ಮಾರ್ಗದ ಸಂಚಾರಣೆಗೆ ಒದಗಿಸಿರುವ ಎಲ್ಲಾ ಬಸ್ಸುಗಳು ಸುಸ್ಥಿತಿಯಲ್ಲಿರುತ್ತವೆ.<br><br>ಬಸ್ಸುಗಳು ಹಳೆಯದಾಗಿರಲಿ ಅಥವಾ ಹೊಸದಾಗಿರಲಿ ಅವುಗಳನ್ನು ಸುಸ್ಥಿಯಲ್ಲಿ ನಿರ್ವಹಣೆ ಮಾಡಲಾಗುತ್ತಿದ್ದು, ಎಲ್ಲಾ ಬಸ್ಸುಗಳಿಗೆ ದೈನಂದಿನ/ವಾರದ ಹಾಗೂ ನಿಯಮಿತ ನಿರ್ವಹಣೆ ಕಾರ್ಯ ಕಡ್ಡಾಯವಾಗಿ ಕೈಗೊಂಡು ಪ್ರಯಾಣಿಕರಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗದಂತೆ ಕ್ರಮವಹಿಸಲಾಗುತ್ತದೆ. |
| ಇ. | ಹಬ್ಬದ ಸಂದರ್ಭದಲ್ಲಿ ಹೆಚ್ಚುವರಿಯಾಗಿ ರಾಜಹಂಸ, ಕಲ್ಯಾಣರಥ, ಐರಾವತ ಬಸ್ಸುಗಳು ಸಂಚರಿಸುತ್ತಿವೆಯೇ; ಯಾವ ಹಬ್ಬಗಳಿಗೆ ಎಷ್ಟು ಬಸ್ಸು ನೀಡಲಾಗಿದೆ; ಸಂಪೂರ್ಣ ಮಾಹಿತಿ ನೀಡುವುದು. | ಹಬ್ಬದ ದಿನಗಳಲ್ಲಿ ನಿಗಮದ ವತಿಯಿಂದ ದೈನಂದಿನ ಕಾರ್ಯಾಚರಣೆಯಲ್ಲಿರುವ ಸಾರಿಗೆಗಳ ಜೊತೆಗೆ ಪ್ರಯಾಣಿಕರ ಒತ್ತಡಕ್ಕನುಗುಣವಾಗಿ ಹೆಚ್ಚುವರಿ ವಿಶೇಷ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿರುತ್ತದೆ.<br><br>2024-25ನೇ ಸಾಲಿನಲ್ಲಿ ಹಬ್ಬ-ಹರಿದಿನಗಳಲ್ಲಿ ರಾಯಚೂರು ವಿಭಾಗದ ವತಿಯಿಂದ ಹೆಚ್ಚುವರಿ ವಿಶೇಷ ಬಸ್ಸುಗಳನ್ನು ಕಾರ್ಯಾಚರಣೆ ಮಾಡಿದ ವಿವರಗಳನ್ನು '**ಅನುಬಂಧ**' ದಲ್ಲಿ ನೀಡಿದೆ.<br><br>ಪ್ರತಿ ವಾರಾಂತ್ಯ, ವಿಶೇಷ ದಿನಗಳು ಮತ್ತು ಹಬ್ಬ-ಹರಿದಿನಗಳಂದು ಬೆಂಗಳೂರಿನಿಂದ ಮತ್ತು ರಾಯಚೂರು ಜಿಲ್ಲೆಯ ವಿವಿಧ ತಾಲ್ಲೂಕು ಕೇಂದ್ರಗಳಿಂದ ಪ್ರಯಾಣಿಕರ ಬೇಡಿಕೆ/ಅವಶ್ಯಕತೆಗನುಗುಣವಾಗಿ ಹೆಚ್ಚುವರಿ ಬಸ್ಸುಗಳನ್ನು ಪೂರ್ವಭಾವಿಯಾಗಿ ಯೋಜಿಸಿ, ಕಾರ್ಯಾಚರಿಸಲು ಕ್ರಮವಹಿಸಲಾಗುತ್ತಿದೆ. |
| ಈ. | ಹಳ್ಳಿಗಳಿಗೆ ಸಂಚರಿಸುವ ಬಸ್ಸುಗಳು ಹಳೆಯ ಬಸ್ಸುಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಸಾರ್ವಜನಿಕ ಹಿತದೃಷ್ಟಿಯಿಂದ ಸಂಚಾರಕ್ಕೆ ಹೊಸ ಬಸ್ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಯಾವ ಕಾಲಮಿತಿಯೊಳಗೆ ಸಂಚಾರಕ್ಕೆ ಅವಕಾಶ ಮಾಡಿಕೊಡಲಾಗುವುದು? | ಉಪ ಪ್ರಶ್ನೆ (ಆ)ರಲ್ಲಿ ಉತ್ತರಿಸಿದೆ. |

ಸಂಖ್ಯೆ: ಟಿಡಿ 6 ಟಿಸಿಕ್ಯೂ 2025

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು

ಅನುಬಂಧ

**ರಾಯಚೂರು ವಿಭಾಗದ ವತಿಯಿಂದ 2024-25 ನೇ ಸಾಲಿನಲ್ಲಿ (ದಿನಾಂಕ:01.04.2024 ರಿಂದ 25.02.2025 ರ ವರೆಗೆ) ಹಬ್ಬ-ಹರಿದಿನಗಳಲ್ಲಿ ಹೆಚ್ಚುವರಿ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಿದ ವಿವರಗಳು**

| ಹಬ್ಬ | ದಿನಾಂಕ | ವೇಗದೂತ | ರಾಜಹಂಸ | ನಾನ್ ಎಸಿ ಸ್ಲೀಪರ್ | ಎಸಿ ಸ್ಲೀಪರ್ | ಒಟ್ಟು ಕಾರ್ಯಾಚರಣೆ ಮಾಡಲಾದ ಹೆಚ್ಚುವರಿ ಬಸ್ಸುಗಳ ಸಂಖ್ಯೆ |
|---|---|---|---|---|---|---|
| ಯುಗಾದಿ ಹಬ್ಬ & ರಂಜಾನ್ | 05.04.2024 ರಿಂದ 07.04.2024 ರ ವರೆಗೆ | 17 | 0 | 0 | 0 | 17 |
| ಮೊಹರಂ | 13.07.2024 ರಿಂದ 15.07.2024 ರ ವರೆಗೆ | 79 | 0 | 0 | 0 | 79 |
| ಗೌರಿ-ಗಣೇಶ | 05.09.2024 ರಿಂದ 07.09.2024 ರ ವರೆಗೆ | 32 | 0 | 0 | 0 | 32 |
| ಈದ್-ಮಿಲಾದ್ | 13.09.2024 ರಿಂದ 14.09.2024 ರ ವರೆಗೆ | 28 | 0 | 0 | 0 | 28 |
| ದಸರಾ | 10.10.2024 ರಿಂದ 12.10.2024 ರ ವರೆಗೆ | 52 | 0 | 0 | 0 | 52 |
| ದೀಪಾವಳಿ | 29.10.2024 ರಿಂದ 01.11.2024 ರ ವರೆಗೆ | 72 | 1 | 1 | 0 | 74 |
| ಕ್ರಿಸ್ ಮಸ್ | 20.12.2024 ರಿಂದ 21.12.2024 ರ ವರೆಗೆ & 24.12.2024 | 22 | 0 | 0 | 0 | 22 |
| ಮಕರ ಸಂಕ್ರಾಂತಿ | 10.01.2025 ರಿಂದ 13.01.2025ರ ವರೆಗೆ | 50 | 0 | 0 | 0 | 50 |
| ಮಹಾ ಶಿವರಾತ್ರಿ | 21.02.2025 ರಿಂದ 23.02.2025 ರ ವರೆಗೆ & 25.02.2025 | 80 | 1 | 0 | 0 | 81 |
| ಒಟ್ಟು | | 432 | 2 | 1 | 0 | 435 |

ಮುಖ್ಯ ಸಂಚಾರ ವ್ಯವಸ್ಥಾಪಕರು,
ಕ.ಕ.ರ.ಸಾ.ನಿ., ಕೇ.ಕ., ಕಲಬುರಗಿ

Scanned with OKEN Scanne